ನಿರುದ್ಯೋಗಿ ಯುವಕರಿಗೆ ವಿಮಾನಗಾರಿಕೆಗೆ ಸರಕಾರದ ಸಹಾಯದ ಬಗ್ಗೆ

೧೫೯೦ (೨೫೨೭) ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಬಂದರು ಮತ್ತು ವಿಮಾನಗಾರಿಕೆ ಹಾಗೂ ಸಣ್ಣ ಕೈಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ನಿರುದ್ಯೋಗಿ ಯುವಕರಿಗೆ ವಿಮಾನಗಾರಿಕೆಯನ್ನು ವೃತ್ತಿಯನ್ನಾಗಿ ಪ್ರಾರಂಭಿಸಲು ಅವಕಾಶ ಕಲ್ಪಿಸಿಕೊಡಲಾಗಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಅದರ ಫಲಾನುಭವಿಗಳ ಸಂಖ್ಯೆ ಎಷ್ಟು ?

ಶ್ರೀ ಎಂ. ರಘುಪತಿ. (ವಿಮಾನಗಾರಿಕೆ ಮತ್ತು ಬಂದರು ಸಚಿವರು).—

ಅ) ನಿಜ.

ಆ) ಕಳೆದ ಐದು ವರ್ಷಗಳ ಫಲಾನುಭವಿಗಳ ಸಂಖ್ಯೆ–೨,೬೦೩.

ಬಳ್ಳಾರಿ ಜಿಲ್ಲೆ ಹರಪನಹಳ್ಳಿ ಪಟ್ಟಣದಲ್ಲಿರುವ ಸರ್ಕಾರಿ ಪದವಿಪೂರ್ವ ಕಾಲೇಜಿನ ಬಗ್ಗೆ

(೧೫೯೩ ೨೬೫೩) ಶ್ರೀ ಬಿ. ಹೆಚ್. ಯಂಕನಾಯಕ(ಹರಪನಹಳ್ಳಿ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬಳ್ಳಾರಿ ಜಿಲ್ಲೆ ಹರಪನಹಳ್ಳಿ ಪಟ್ಟಣದಲ್ಲಿರುವ ಸರ್ಕಾರಿ ಪದವಿಪೂರ್ವ ಕಾಲೇಜು ಸ್ಥಾಪನೆಯಾಗಿ ಒಂದು ನೂರು ವರ್ಷ ತುಂಬುತ್ತಿರುವುದು ನಿಜವಲ್ಲವೇ ?

ಆ) ಇಂತಹ ಹಳೆಯ ಕಾಲೇಜಿನಲ್ಲಿ ಪೀಠೋಪಕರಣಗಳಿಗೆ ಮತ್ತು ಪ್ರಯೋಗಶಾಲೆಗೆ ಪ್ರಸ್ತಾವನೆ ಬಂದಲ್ಲಿ ಸರ್ಕಾರ ಪರಿಶೀಲಿಸಿ ಕೊಡುವುದಾಗಿ ಮಾನ್ಯ ಸಚಿವರು ಹಿಂದೆ ಹೇಳಿದ್ದು ನಿಜವಲ್ಲವೇ?

ಇ) ಹಾಗಿದ್ದರೂ ಸದರಿ ಕಾಲೇಜಿನಿಂದ ಪ್ರಸ್ತಾವನೆ ಹೋಗಿದ್ದರೂ ಸರ್ಕಾರದವರೂ ಹಣ ಮಂಜೂರುಮಾಡದೆ ಇರಲು ಕಾರಣಗಳೇನು ?

ಈ) ಶತಮಾನೋತ್ಸವ ಕಟ್ಟಡ ಕಟ್ಟಿಸಲು ಸರ್ಕಾರದವರು ಹಣವನ್ನು ಮಂಜೂರು ಮಾಡುವರೇ ?

ಶ್ರೀ ಜೀವರಾಜ ಆಳ್ವ(ಉನ್ನತ ಶಿಕ್ಷಣ ಸಚಿವರು).—

ಅ) ನಿಜ.

ಆ) ನಿಜ.

ಇ) ಆರ್ಥಿಕ ಮಿತವ್ಯಯ ಜಾರಿಯಲ್ಲಿರುವುದರಿಂದ ಹಣ ಮಂಜೂರು ಮಾಡಲಾಗಿಲ್ಲ.

ಈ) ಆರ್ಥಿಕ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಪ್ರಸ್ತಾವನೆ ಕಳುಹಿಸಿದಲ್ಲಿ ಪರಿಶೀಲಿಸಲಾಗುವುದು.

ಜಿಲ್ಲಾಪರಿಷತ್ತು ನಿಯಂತ್ರಣದಲ್ಲಿರುವ ಶಾಲೆಗಳ ಬಗ್ಗೆ

೧೫೯೪ (೨೦೩೭) ಶ್ರೀ ಬಿ. ಹೆಚ್. ಯಂಕನಾಯಕ (ಹರಪನಹಳ್ಳಿ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಜಿಲ್ಲಾಪರಿಷತ್ತುಗಳು ಪುರಸಭೆಯ ವ್ಯಾಪ್ತಿಯಲ್ಲಿ ಬರುವ ಶಾಲೆಗಳ ಆಡಳಿತ ನಿಯಂತ್ರಣವನ್ನು ಮಾತ್ರ ವಹಿಸಿಕೊಂಡು ಅದರ ಕಟ್ಟಡ ಮತ್ತು ಇನ್ನಿತರ ಅಭಿವೃದ್ಧಿ ಕಾರ್ಯಗಳಿಗೆ ಗಮನ ಹರಿಸದೆ ಇರುವುದು ನಿಜವೇ ?

ಆ) ಹಾಗಾದರೆ ಇದಕ್ಕೆ ಬದಲಿ ಪರಿಹಾರವೇನು ?